ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

CC No : 115/2015

CW. 7 PW.2

**ಹೆಸರು** ಃ ಪ್ರಸನ್ನ
ತಂದೆ ಃ ತಿಮ್ಮೇಗೌಡ
ವಯಸ್ಸು ಃ 51 ವರ್ಷ
ಉದ್ಯೋಗ ಃ ಮುಖ್ಯ ಪೇದೆ ಅಕ್ಕೂರು ಪೋಲೀಸ್ ಠಾಣೆ
ವಾಸ ಃ ತಿಟ್ಟಮಾರನ ಹಳ್ಳಿ.

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ ಃ ದಿಃ01.12.2022

ನಾನು 2013 ರಿಂದ 2015 ವರೆಗೆ ಚನ್ನಪಟ್ಟಣ ಪುರ ಪೋಲೀಸ್ ಠಾಣೆಯಲ್ಲಿ ಪೇದೆ ಅಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.20.10.2014 ರಂದು ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ನನ್ನನ್ನು ಮತ್ತು ಚಾಸಾ-5 ಮತ್ತು 6 ರವರನ್ನು ಠಾಣೆಗೆ ಕರೆದುಕೊಂಡು ಮಂಜುನಾಥನಗರ ಮೂರನೇ ಕ್ರಾಸ್ ಬಳಿ ವೇಶ್ಯಾವಟಿಕೆ ನಡೆಯುತ್ತಿರುವ ಬಗ್ಗೆ ತಿಳಿಸಿ ನಮ್ಮಗಳ ಜೊತೆ ಪಂಚಾಯಿತದಾರರನ್ನು ಕರೆದುಕೊಂಡು ಮಂಜುನಾಥ ನಗರ ಮೂರನೇ ಕ್ರಾಸ್ ಬಳಿ ಹೋಗಿದ್ದ ಸಮಯದಲ್ಲಿ ಮನೆಯ ಒಂದನೇ ಮಹಡಿಯ ಮೇಲೆ ನಿಂತಿದ್ದ ಮಹಿಳೆಯು ನಮ್ಮನ್ನು ನೋಡಿ ಹೋಗಿ ಮನೆಯ ಬಾಗಿಲನ್ನು ಹಾಕಿಕೊಂಡಳು, ನಂತರ ನಾವುಗಳು ಪಂಚಾಯಿತಿದಾರರ ಸಮಕ್ಷಮ ಬಾಗಿಲನ್ನು ಬಡೆದು ತೆಗೆಸಿ ಕೇಳಲಾಗಿ ಮನೆಯ ಮಾಲೀಕರು ಪುಷ್ಪ ಎಂದು ತಿಳಿಸಿರುತ್ತಾರೆ ನಂತರ ಮನೆಯಲ್ಲಿ ಒಂದು ರೂಮು ಇದ್ದು ರೂಮಿನ ಬಾಗಿಲು ತೆರೆಯಲು ಹೇಳಿದಾಗ ತೆರೆಯಲಿಲ್ಲ ಪಂಚಾಯಿತಿದಾರರ ಸಮಕ್ಷಮ ಬಾಗಿಲನ್ನು ಬಡಿದು ತೆರೆಯಿಸಲಾಗಿ ರೂಮಿನ ಒಳಗಡೆ ಒಬ್ಬ ಗಂಡಸು ಇದ್ದು ಅತನನ್ನು ವಿಚಾರಿಸಿ ವಿಳಾಸ ಕೇಳಲಾಗಿ ಆತನ ಹೆಸರು ಶಂಕರ್ ರಾಮನಗರ ಟೌನ್ ಎಂದು ತಿಳಿಸಿರುತ್ತಾರೆ. 1 ನೇ ಆರೋಪಿ 2 ನೇ ಅರೋಪಿಗೆ ರವರಿಗೆ ಒಂದು ಸಾವಿರ ರೂ ನೀಡಿರುವುದಾಗಿ ಮತ್ತು ಅದೇ ರೂಮಿನಲ್ಲಿ ಇದ್ದ ಚಾಸಾ-2 ರವರ ಜೊತೆ ವೇಶ್ಯಾವಟಿಕೆ ನಡೆಸಲು ಅನುವು ಮಾಡಿಕೊಟ್ಟಿರುತ್ತಾರೆ ಇದರ ಬಗ್ಗೆ

1 ನೇ ಆರೋಪಿ ತಿಳಿಸಿರುತ್ತಾರೆ. ನಂತರ ಪಂಚಾಯಿತಿದಾರರ ಸಮಕ್ಷಮ ನಿಪಿ-1 ರಂತೆ ಮಹಜರು ಕ್ರಮ ಜರುಗಿಸಿ ನಂತರ 1 ನೇ ಆರೋಪಿ ಬಳಿ ಇದ್ದ 300 ರೂಗಳು ಮತ್ತು ಎರಡು ಕಾಂಡೂಮ್‌ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸದರಿ ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ಠಾಣೆಗೆ ಕರೆದುಕೊಂಡು ಹೋಗಿ ಮುಂದಿನ ಕ್ರಮ ಜರುಗಿಸಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಹಾಯಕ ಸರ್ಕಾರಿ ಅಭಿಯೋಜಕರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.